**ಆಮೆ**
**ತನ್ನ ಹೆಂಡತಿಗೆ**
**ಕರೆಯುವುದು–**
**ಭಾಮೆ!**

**ಆನೆ**
**ತನ್ನ ಹೆಂಡತಿಗೆ**
**ಹೇಳುವುದು-**
**ಏನೆ...**

**ನರಿ**
**ತನ್ನ ಗಂಡನಿಗೆ**
**ಹೇಳುವುದು–**
**ಏ–ನರಿ!**

ಹೀಗೆ ಕವಿತೆಯು ಭಾಷೆಯ ಜೊತೆಗಿನ ಚೆಲ್ಲಾಟದಲ್ಲಿ ಓದುಗರ ಮೊಗದಲ್ಲಿ ಮಂದಹಾಸವನ್ನು ಮೂಡಿಸುವ ಪರಿ ಅನುಭವಿಸಲು ಯೋಗ್ಯವಾಗಿದೆ.

ಅಭಿನವದ 'ಆದಿಕಾವ್ಯ–2' ಸಂಕಲನದ ಕವಿತೆಗಳು ತಮ್ಮ ತುಂಟ, ಹಾಸ್ಯಭರಿತ ನೋಟದಿಂದ ಏಕ ಕಾಲದಲ್ಲಿ ಮಕ್ಕಳನ್ನೂ ಮಗುಮನಸಿನ ಹಿರಿಯರನ್ನೂ ಸೆಳೆಯುತ್ತದೆ.

**ಬಂತು ದೀಪಾವಳಿ ಈವತ್ತು**
**ಅದು ಇಲ್ಲೀತನಕ ಎಲ್ಲಿತ್ತು?**
**ಕಾರವಾರದ ಕಡಲೊಳಗಿತ್ತು**
**ಧಾರವಾಡದ ಫೇಡ್‌ಫೇಡೆಯೊಳಗಿತ್ತು**
**ಬಳ್ಳಾರಿ ಪೇಟೆಯ ಬಾಣಲೆಯೊಳಗಿತ್ತು**
**ಮೈಸೂರು ಪೇಟೆಯ ಮಲ್ಲಿಗೆಯೊಳಗಿತ್ತು**

ಅಂತ ವರ್ಣಿಸುತ್ತಾ ಹೋಗುವ ಕವಿತೆಯು ಬಿಚ್ಚಿ ಕೊಳ್ಳುವ ಪರಿ ಮೋಹಕವಾಗಿದೆ. ಕವಿತೆ ಒಂದು ಲೀಲೆ ಎಂಬುದನ್ನು ಮನಗಾಣಿಸುವ ಇಂತಹ ಕವಿತೆಗಳು ಮಕ್ಕಳಿಗೆ ಎಷ್ಟಿದ್ದರೂ ಬೇಕು.

'ಪುಟ್ಟನ ಎಬ್ಬಿಸಲೆಷ್ಟು ಜನ' ಎಂಬ ಪ್ರಶ್ನೆಯಿಂದ ಆರಂಭವಾಗುವ ಕವಿತೆಯೊಂದು ಕೊನೆಗೆ ಅವನೇನು ಕುಂಭಕರ್ಣನಾ ಅಂತ ಕೇಳಿ ನಗೆಯಾಡುತ್ತದೆ. ಇಲ್ಲಿನ ಕವಿತೆಗಳು ಡೈವರ್ಜೆಂಟ್ ಥಿಂಕಿಂಗ್‌ಗೆ ಉತ್ತಮ ಮಾದರಿಗಳಾಗಿಯೂ ಕಂಗೊಳಿಸುತ್ತವೆ. ಈ ಮಾಲೆಯ ಎಲ್ಲ ಸಂಕಲನಗಳೂ ಅತಿ ವಿಶಿಷ್ಟ ಎನಿಸುವ ಹಲವು ಕವಿತೆಗಳ ಗುಚ್ಛ.



ಕೆ.ವಿ. ತಿರುಮಲೇಶ್

ಇಂಗ್ಲಿಷಿನ ಮಕ್ಕಳ ಸಾಹಿತ್ಯವನ್ನು ಸಮೃದ್ಧಿಗೊಳಿಸಿರುವ ಹಲವು ಲೇಖಕರಲ್ಲಿ ಎ.ಎ. ಮಿಲ್ನೆ ದೊಡ್ಡ ಹೆಸರು. ಅದರಲ್ಲಿಯೂ Winnie the Pooh ಕಾದಂಬರಿಯು ನೂರು ವರ್ಷಗಳ ಹಿಂದೆ ರಚಿಸಲಾದ ಕೃತಿಯಾದರೂ ಇಂದಿಗೂ ಅದರ ಸೊಬಗು, ಆಕರ್ಷಣೆ ಮುಕ್ಕಾಗಿಲ್ಲ. ಪೂಹಾ ಎಂಬ ಕರಡಿಯ ಕಥೆ ಇದಾದರೂ, ಬಾಲ್ಯದ ಸಮೃದ್ಧಿಯ ಇದು ಅನಾವರಣಗೊಳಿಸುವ ಬಗೆ ಅನ್ಯಾದೃಶ. ಧಾರವಾಡದ ಮೋಹಕ ಕನ್ನಡ ಇದರ ಶಕ್ತಿ.

ಮಕ್ಕಳಿಗಾಗಿ ಹತ್ತಾರು ಕೃತಿಗಳನ್ನು ರಚಿಸಿರುವ, ವಿಶ್ವ ಮಕ್ಕಳ ಸಾಹಿತ್ಯದ ಆಳವಾದ ಹಾಗೂ ವಿಸ್ತಾರವಾದ ಅಧ್ಯಯನದಿಂದ ಹದಗೊಂಡ ಭಾವತೀರದಿಂದ ಆನಂದ ಪಾಟೀಲ ಅವರು ಕನ್ನಡಿಸಿರುವ 'ವಿನ್ನೀ ದ ಪೂಹಾ' ಕೃತಿ, ಕನ್ನಡ ಮಕ್ಕಳ ಸಾಹಿತ್ಯ ಲೋಕಕ್ಕೆ ಒಂದು ಅಮೂಲ್ಯ ಕೊಡುಗೆ. ವಿಶ್ವದ ಅತ್ಯಂತ ಶ್ರೇಷ್ಠ ಮಕ್ಕಳ ಸಾಹಿತ್ಯ ಕನ್ನಡಕ್ಕೂ ಬರಬೇಕೆಂದು ಹಾರೈಸಿ, ಹಂಬಲಿಸುವವರೆಲ್ಲರೂ ಕೈಗೆತ್ತಿಕೊಂಡು ಲಾಲಿಸಬೇಕಾದ ಈ ಎಲ್ಲ ಕೃತಿಗಳು ಮಕ್ಕಳ ಮನೆ–ಮನಗಳಲ್ಲಿ ಬೆಳಗಲಿ. ಎಲ್ಲರ ಹೃದಯದ ಒಳಗಡಗಿರುವ ಆ ಆನಂದದ ದಿವ್ಯ ಶಿಶು ಇವನ್ನು ಓದಿ, ನಲಿದಾಡಲಿ, ಕುಣಿದಾಡಲಿ, ಚಪ್ಪಾಳೆ ತಟ್ಟಲಿ. ●